# ಒಡಲ ಬೆಂಕಿ

■ ಸಿರಿಮೂರ್ತಿ ಕಾಸರವಳ್ಳಿ

'ಖೊಖ್ ಖೊಖ್' ಒಮ್ಮೇಲೆ ಬಂದ ಐದಾರು ಕೆಮ್ಮುಗಳು ಉಸಿರು ಮೇಲೆ ಕೆಳಗೆ ಆಗುವಂತೆ ಮಾಡಿತ್ತು. ನಾಲಿಗೆ ಗಂಟಲು ಒಣಗಿ ಏನಾದರೂ ಕುಡಿಯಬೇಕೆನಿಸುತ್ತಿತ್ತು. ಒಳಗೆ ಸೊಸೆ ಮಗನ ಪಿಸು ಮಾತು ಒಂದೇ ಸಮನೆ ಕೇಳುತ್ತಿದ್ದರೂ ಏನಂತ ಅರ್ಥವಾಗುತ್ತಿರಲಿಲ್ಲ. ಆ ಗಟ್ಟಿ ಹೆಣ್ಣು ನನ್ನ ವಿಷಯವನ್ನೇ ಹೇಳಿ ಮಗನ ಕಿವಿ ತುಂಬುತ್ತಿರಬಹುದು ಎನಿಸಿತು. ಈ ಪಾರ್ಶ್ವವಾಯು ಬಡಿದು ನನ್ನ ಕೈಕಾಲು ಸ್ವಾಧೀನ ತಪ್ಪದಿದ್ದರೆ ಬಾಯಿ ಕಟ್ಟದಿದ್ದರೆ ಇವಳು ಹೀಗೆ ವರ್ತಿಸುತ್ತಿದ್ದಳೆ? ಬಂದ ಹೊಸದರಲ್ಲಿ ಎಲ್ಲಕ್ಕೂ ನನ್ನನ್ನೇ ಕೇಳುತ್ತಿದ್ದಳು. ನಾನೇ 'ನನ್ನನ್ಯಾಕೆ ಕೇಳ್ತೀ ತಾಯಿ. ಇದು ನಿನ್ನ ಮನೆ' ಅಂದರೆ 'ನೀವು ಹಿರಿಯರು. ಮನೆ ನಿಮ್ಮದು ಮಾವಯ್ಯಾ' ಅಂತ ಹೇಳುತ್ತಿದ್ದಳು. ನಾನು ಈ ಸ್ಥಿತಿಗೆ ಬಂದ ಹೊಸದರಲ್ಲೂ ನನ್ನ ಹೊಲಸೆಲ್ಲಾ ಅವಳು ಸ್ವಚ್ಛ ಮಾಡುತ್ತಿದ್ದಾಗ ನಾನು ಸಂಕೋಚಪಟ್ಟರೆ ಅವಳು 'ಬಿಡಿ ಮಾವಯ್ಯ, ನಿಮ್ಮ ಸೇವೆ ಮಾಡುವುದೂ ಒಂದು ಪುಣ್ಯ. ನಾನೂ ನಿಮ್ಮ ಮಗಳಂತಾನೇ ತಿಳಕೊಳ್ಳಿ' ಅಂತಿದ್ದಳು. ಕ್ರಮೇಣ ನಾನು ಇರುವುದು ಅವಳಿಗೆ ಹಿರಗಲಾಗಿ ಕಂಡಿತ್ತು. ಗಂಜಿ ಕುಡಿಸಲು ಬಂದಾಗ ದುಮುಗುಟ್ಟುವ ಅವಳ ಮುಖನೋಡಿದರೆ ಉಪವಾಸ ಸಾಯೋಣ ಅನಿಸುತ್ತಿತ್ತು. ಮಗ ಮನೆಯಲ್ಲಿದ್ದಾಗ ತೋರಿಕೆಗಾದರೂ ನನ್ನ ಹಾಸಿಗೆ ಸ್ವಚ್ಛಗೊಳಿಸುತ್ತಿದ್ದಳು. ಇಲ್ಲದಾಗ ಎರಡು ಮೂರು ದಿನ ನಾನು ಹೊಲಸಲ್ಲೇ ಮಲಗಬೇಕಿತ್ತು.

ಮಗ ಚಂದ್ರುವನ್ನು ಕಂಡಾಗಲೆಲ್ಲ ಅವನಮ್ಮನ ನೆನಪು ಬರುತ್ತಿತ್ತು. ರೂಪದಲ್ಲಿ ಗುಣದಲ್ಲಿ ಚಂದ್ರು ತಾಯಿಯನ್ನೇ ಹೋಲುತ್ತಿದ್ದ. ಅವನಿಗೆ ಮೊದಲಿಂದ ನನ್ನಲ್ಲಿ ಸಲಿಗೆ ಕಮ್ಮಿ. ಎಲ್ಲಕ್ಕೂ ಅಮ್ಮನೇ ಬೇಕು. ಅಮ್ಮ ಹೋದ ಮೇಲಂತೂ ನಮ್ಮಿಬ್ಬರ ಅಂತರ ಇನ್ನೂ ಹೆಚ್ಚಿತ್ತು. ಇಬ್ಬರ ಮಧ್ಯೆ ಸೇತುವೆಯಂತಿದ್ದಳು ಮೀನಾಕ್ಷಿ. ಮೀನಾಕ್ಷಿ 'ನನ್ನ ಮೀನಾ' ಅವಳು ಈಗ ಬದುಕಿದ್ದರೆ ನನಗೆ ಈ ಸ್ಥಿತಿ ಬರುತ್ತಿತ್ತೆ. ನಾನು ಹೀಗೆ ಮಲಗಿದ್ದರೆ ಎಷ್ಟು ಸಂಕಟ ಪಡುತ್ತಿದ್ದಳೊ. ಪುಣ್ಯಾತ್ಗಿತ್ತಿ ಒಮ್ಮೆಲೆ ಯಾವ ಕಾಯಿಲೆಯೂ ಇಲ್ಲದೆ ಒಬ್ಬರ ಹತ್ರ ಯಾವ ಸೇವೇನೂ ಮಾಡಿಸಿಕೊಳ್ಳದೆ ನಡೆದಳು. ಅವಳು ಪುಣ್ಯ ಮಾಡಿದ್ದಳು.

ನೀನು ಮಾಡಿದ ಪಾಪಕ್ಕೆ ನಿನಗೆ ಈ ಶಿಕ್ಷೆ ಎಂದು ನನ್ನ ಚುಚ್ಚುತ್ತಿರುವ ಈ ಒಳಗಿನ ವ್ಯಕ್ತಿ ಯಾರು. ನನ್ನಲ್ಲೇ ಅಡಗಿ ಸದಾ ನನ್ನ ಸ್ಥಿತಿ ನೋಡಿ ನಗುತ್ತಿರುವ ಈ ಒಳಗಿನವನಿಗೆ ನಾನು ಎಷ್ಟುಬಾರಿ ಹೇಳಿದ್ದೀನಿ,'ನಾನು ಮಾಡಿದ್ದು ಅನ್ಯಾಯ ನಿಜ. ಆದರೆ ಅದರ ಪರಿಣಾಮ ಇಷ್ಟು ಭೀಕರ ಅಂತ ಗೊತ್ತಿದ್ದರೆ ಮಾಡುತ್ತಿದ್ದೆನೆ'. ನನ್ನಲ್ಲೆ ಅಡಗಿದ ನನ್ನೊಂದಿಗೆ ಅಂತ್ಯವಾಗುವ ಈ ನನ್ನ ರಹಸ್ಯವನ್ನು ಹೇಗೊ ತಿಳಿದುಕೊಂಡ ಈ ಒಳಗಿನ ಆತಂಕ ಸದಾ ನನ್ನನ್ನು ಚುಚ್ಚಿ ನೆನಪುಗಳು ಮರುಕಳಿಸುವಂತೆ ಮಾಡುತ್ತಾನೆ. ಎಷ್ಟು ಸಾರಿ ಆಗಿದ್ದನ್ನು ಮರೆಯಲು ನಾನು ಪ್ರಯತ್ನಿಸಿದರೂ ಅವನು ಬಿಡಲೊಲ್ಲ. ನನ್ನ ಕೈಲಿ ಆ ಕೆಟ್ಟ ಕೆಲಸ ನಡೆಯುವಾಗ ಒಮ್ಮೆಲೆ ಈ ವ್ಯಕ್ತಿ ಹುಟ್ಟಿದ್ದ. ಅಂದಿನಿಂದ ಇಂದಿನವರೆಗೂ ನಮ್ಮಿಬ್ಬರಲ್ಲಿ ಘರ್ಷಣೆ ನಡೆಯುತ್ತಿರುತ್ತದೆ. ಈಗಲೂ ಮತ್ತೆ ಹಳೆಯದನ್ನ ನೆನಪಿಸುವವನು ಅವನೇ. ಅವನಿಂದಲೇ ನೆನಪಿನ ಸುರುಳಿ ಬಿಚ್ಚುತ್ತಿದೆ.

ನಾನು ಎಂಟು ವರ್ಷದವನಿದ್ದಾಗಲೇ ನನ್ನ ತಾಯಿ ಆ ದೊಡ್ಡಮನೆಗೆ ನನ್ನ ತಂದು ಬಿಟ್ಟಿದ್ದರು. ಹುಟ್ಟಿದ ವರ್ಷವೇ ತಂದೇನ ಕಳೆದುಕೊಂಡಿದ್ದ ನನಗೆ ತಾಯಿ ಕಷ್ಟಪಟ್ಟು ಸಾಕಿ, ಒಂದು ಮುಂಜಿ ಮಾಡಿದ್ದರು. ದಿನ ದಿನಕ್ಕೆ ಅವರ ಆರೋಗ್ಯ ಕೆಡುತ್ತಿತ್ತು. ತಾನು ಗಟ್ಟಿಯಿದ್ದಾಗ ಮಾಣಿನ ಒಂದು ಸರಿಯಾದ ಮನೇಲಿ ಬಿಡಬೇಕಂತ ಎಲ್ಲರ ಹತ್ರಾನೂ ಹೇಳುತ್ತಿದ್ದರು. ಯಾರೋ ಒಮ್ಮೆ ಅಮ್ಮನಿಗೆ ವೆಂಕಪ್ಪನ ಮನೆ ವಿಚಾರ ಹೇಳಿದರು. ಅಲ್ಲಿ ದೇವರ ಪೂಜೆ ಅದೂ ಇದು ಮಾಡಲು ಸಣ್ಣ ಮಾಣಿ ಬೇಕಂತ ಗೊತ್ತಾಗಿದ್ದೆ ತಡ ಅಮ್ಮ ತಮ್ಮ ಹಳೇ ಟ್ರಂಕು, ಒಂದಷ್ಟು ಬಟ್ಟೆಯ ಗಂಟು ಹೊತ್ತುಕೊಂಡು ನನ್ನ ಕರಕೊಂಡು ಆ ಮನೆ ಬಂದಿದ್ದರು. ಅಲ್ಲಿ ನನ್ನ ಬಿಟ್ಟು ಊರಿಗೆ ನಡೆದಿದ್ದರು. ಊರಲ್ಲಿ ಅಮ್ಮನಿಗೇನೂ ಆಸ್ತಿಯಿರಲಿಲ್ಲ. ಅವರಿವರ ಮನೆಯ ಕೆಲಸ ಮಾಡುತ್ತಿದ್ದರು. ವೆಂಕಪ್ಪನವರು ನೀವೂ ಮಗನೊಟ್ಟಿಗೆ ಇಲ್ಲಿಯೇ ಕೆಲಸ ಮಾಡಿಕೊಂಡು ಇರಿ ಅಂದರೂ ಕೇಳಿರಲಿಲ್ಲ. 'ನಾನು ಸಾಯೂದು ಅದೇ ಊರಲ್ಲೇ. ಇಕಳ್ಳಿ ಇವತ್ತಿಂದ ಈ ಮಾಣಿ ನಿಮ್ದು. ನಾನು ಸತ್ರೆ ಇದ್ರ ಹತ್ರಕರ್ಮ ಒಂದು ಮಾಡಿಸಿಬಿಡಿ' ಎಂದು ಅಳುತ್ತಾ ಅಮ್ಮ ಹೊರಟು ಹೋಗಿದ್ದರು.

ಅಮ್ಮ ಹೋದ ದಿನ ನಾನು ಕಂಗಾಲಾಗಿ ದೊಡ್ಡಮನೆಯ ಬಚ್ಚಲಲ್ಲಿ ಬಾಗಿಲು ಹಾಕಿಕೊಂಡು ಅತ್ತಿದ್ದೆ. ಬೇರೆಲ್ಲಿ ಅಳಲೂ ಆಗ ನಂಗೆ ಭಯ. ಇಲ್ಲಾದ್ರೆ ಮಾಣಿ ಸ್ನಾನ ಮಾಡ್ತಿದೆ ಅಂದುಕೋತಾರಂತ ಅಲ್ಲೇ ಅತ್ತಿದ್ದೆ. ನಾನು ಆ ಮನೆಗೆ ಬಂದಾಗ ಅಲ್ಲಿ ವರ್ಷದ ಕೂಸು. ಆ ದೊಡ್ಡಮನೆಯಲ್ಲಿ ಇರುವವರೆಂದರೆ ನನ್ನೂ ಸೇರಿ ನಾಲ್ಕೇ ಜನ. ವೆಂಕಪ್ಪನವರು, ಅವರ ಪತ್ನಿ ಸೀತಮ್ಮ ಮತ್ತು ಮಗಳು ಲಿಲ್ಲಿ. ಆ ದಂಪತಿಗಳಿಗೆ ಅಪರೂಪಕ್ಕೆ ಹುಟ್ಟಿದ ಒಂದೇ ಫಲ ಲಿಲ್ಲಿ. ವೆಂಕಪ್ಪನವರದು ಗಂಭೀರ ಪ್ರವೃತ್ತಿ. ಅವರು ಆಡುವ ಮಾತು ಬಹಳ ಕಮ್ಮಿ. ಲಲ್ಲಿಯಿನ್ನೂ ಮಾತು ಬಾರದ ಕೂಸು. ಹಾಗಾಗಿ ಸೀತಮ್ಮನಿಗೆ ನಾನು ಅಲ್ಲಿ ಇದ್ದುದು ತುಂಬಾ ಸಂತೋಷವಾಗಿತ್ತು. ಸುಬ್ಬಣ್ಣಾ ಅಂತ ಎಲ್ಲಕ್ಕೂ ನನ್ನೇ ಕರೆಯುತ್ತಿದ್ದರು. ಲಲ್ಲಿಯಂತೂ ಸದಾ ನನ್ನ ಸೊಂಟದಲ್ಲೇ. ಲಿಲ್ಲಿ ಮಾತು ಕಲಿತ ಮೇಲಂತೂ ನನ್ನ ಅವಳ ಸ್ನೇಹ ಇನ್ನೂ ಹೆಚ್ಚಿತ್ತು. ಅವಳಿಗೆ ಆನೆಯಾಗಿ, ಮನೆಯಾಟದಲ್ಲಿ ಗಂಡ, ಶಾಲೆ ಆಟದಲ್ಲಿ ಶಿಷ್ಯ ಹೀಗೆ ಎಲ್ಲಕ್ಕೂ ನಾನೇ ಆಗಬೇಕಿತ್ತು. ಒಮ್ಮೊಮ್ಮೆ ಅವಳು ಅಮ್ಮನಾಗಿ ನನ್ನ ಪಾಪು ಮಾಡಿ ಬಿಡುತ್ತಿದ್ದಳು.

ಲಿಲ್ಲಿ ದೊಡ್ಡವಳಾಗುತ್ತಿದ್ದಂತೆ ನನ್ನನ್ನು ಅವಳು ಎಲ್ಲಕ್ಕೂ ಆಶ್ರಯಿಸುತ್ತಿದ್ದಳು. ಹೈಸ್ಕೂಲಿಗೆ ಹೋಗುತ್ತಿದ್ದ ಲಿಲ್ಲಿ 'ಸುಬ್ಬಣ್ಣಾ ನನ್ನ ಪೆನ್ನಿಗೆ ಇಂಕು ಹಾಕು, ನನ್ನ ಬಟ್ಟೆ ಇಸ್ತ್ರಿ ಮಾಡಿಕೊಡು, ನನ್ನ ರಾಜೀವಿ ಮನೆಗೆ ಬಿಟ್ಟುಬಾ', ಹೀಗೆ ಅವಳ ನೂರಾರು ಕೆಲಸಕ್ಕೂ ನಾನೇ ಬೇಕಿತ್ತು. ಒಮ್ಮೊಮ್ಮೆ ಅಮ್ಮ ಗದರುತ್ತಿದ್ದರು 'ಎಂತದೇ ಲಿಲ್ಲಿ. ಸದಾ ಅವನನ್ನ ಗೋಳು ಹುಯ್ಯೋದು' ಎನ್ನುತ್ತಿದ್ದರು. ನಂಗೆ ಮಾತ್ರ ಲಿಲ್ಲಿಯ ಯಾವ ಕೆಲಸವೂ ಬೇಸರವೆನಿಸುತ್ತಿರಲಿಲ್ಲ. ಅಮ್ಮನಂತೂ ನಮ್ಮಿಬ್ಬರನ್ನು ಒಂದೇ ರೀತಿ ಕಾಣುತ್ತಿದ್ದರು. ಲಿಲ್ಲಿಗೆ ಕೊಡುವ ತಿಂಡಿಗಳು ನನಗೂ ಸಿಗುತ್ತಿತ್ತು. ಲಿಲ್ಲಿಯ ಹೈಸ್ಕೂಲು ಓದು ಮುಗಿಯುತ್ತಿದ್ದಂತೆ ನನಗೆ ಒಮ್ಮೆಲೇ ಎರಡು ಆಘಾತ ಕಾದಿತ್ತು. ಒಂದು ಲಿಲ್ಲಿ ಓದಲು ಮೈಸೂರಿಗೆ ಹೋಗುವವಳಿದ್ದಳು. ಅವಳ ಅಗಲಿಕೆ ನನಗೆ ತುಂಬಾ ನೋವಾಗಿತ್ತು. ಒಬ್ಬನೇ ಆ ಮನೆಯಲ್ಲಿ ಬೇಸರವಾದಾಗ ಅಳುತ್ತಿದ್ದೆ. ನನ್ನ ಅಮ್ಮ ಸತ್ತದ್ದೂ ಅದೇ ವರ್ಷ. ವರ್ಷಕ್ಕೊಮ್ಮೆ ಮುಖ ತೋರಿಸಿ ಹೋಗುತ್ತಿದ್ದ ಅಮ್ಮ ಸತ್ತ ವರ್ತಮಾನ ಬಂದಾಗ ನನಗೆ ಹೆಚ್ಚೇನೂ ನೋವಾಗಿರಲಿಲ್ಲ. ವೆಂಕಪ್ಪನವರೇ ನನ್ನನ್ನು ಗೋಕರ್ಣಕ್ಕೆ ಕಳಿಸಿ ಅಮ್ಮನ ಶ್ರಾದ್ಧ ಮಾಡಿಸಿದ್ದರು.

ರಜ ಬಂದಾಗಲೆಲ್ಲ ಲಿಲ್ಲಿ ಬರುತ್ತಿದ್ದಳು. ಅವಳಿಗೆ ನನ್ನ ಮೇಲೆ ಮೊದಲಿನ ಅಭಿಮಾನವೇ ಇತ್ತು. ಲಿಲ್ಲಿಗೆ ತಾನು ಡಾಕ್ಟರ್ ಆಗುವ ಹಂಬಲ ಬಹಳವಿತ್ತು. ಅದಕ್ಕಾಗಿ ಅವಳು ಕಷ್ಟಪಟ್ಟು ಓದುತ್ತಿದ್ದಳು. ಅವಳು ಓದುವುದನ್ನು ನೋಡಿ ನಂಗೂ ನಾನು ಓದಬೇಕಿತ್ತು ಅನಿಸುತ್ತಿತ್ತು. ಲಿಲ್ಲಿಯೇ ನಂಗೆ ಓದೋಕೆ ಬರೆಯೋಕೆ ಕಲಿಸಿದ್ದಳು.

ಲಿಲ್ಲಿ ಮೊದಲನೇ ವರ್ಷ ಡಾಕ್ಟರ್ ಪರೀಕ್ಷೆ ಕಟ್ಟಿದ್ದಳು. ಆಗ್ಲೇ ನನಗೆ ಮದುವೆಯಾಗಿದ್ದು. ಅದೇ ಊರಿನ ರಾಮಾ ಜೋಯಿಸರ ಆರನೇ ಮಗಳು ಮೀನಾಕ್ಷಿನ ನಂಗೆ ಗೊತ್ತು ಮಾಡಿದ್ದು ಸೀತಮ್ಮನೆ. ಒಂದಿನ ಊಟಕ್ಕೆ ಕೂತಾಗ ಹೇಳಿದ್ರು 'ಸುಬ್ಬಣ್ಣ ನಿಂಗೂ ಮದುವೆ ವಯಸ್ಸು ಬಂತು. ಆಗೂ ಕಾಲಕ್ಕೆ ಆದ್ರೆ ಚಂದ ನೋಡು. ನಾನೊಂದು ಹುಡ್ಗಿ ನೋಡಿದೀನಿ. ನೀನೂ ನೋಡು. ಒಪ್ಪಿಗೆಯಾದ್ರೆ ಯಜಮಾನರಿಗೆ ಹೇಳ್ತೀನಿ ಅಂದ್ರು'. ನಂಗೆ ಕಣ್ಣಲ್ಲಿ ನೀರೇ